ಶ್ರೀ ಬಿ. ಚನ್ನಬೈರೇಗೌಡ.—ಆಸ್ಪತ್ರೆಗೆ ಬರತಕ್ಕ ರೋಗಿಗಳಿಗೆಲ್ಲ ಚಿಕಿತ್ಸೆ ನೀಡುವುದು ಸರ್ಕಾರದವರ ಕರ್ತವ್ಯವಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಈಗ ಬೆಂಗಳೂರು ಮತ್ತು ತುಮಕೂರು ಈ ಎರಡು ಕಡೆಗಳಲ್ಲಿ ಮಾಡೆಲ್ ಕ್ಲಿನಿಕ್ ಡಿಸಿಮಿಲರಿ ಟ್ರೀಟ್‌ಮೆಂಟ್ ಎಂತ ಒಂದು ಟ್ರೀಟ್‌ಮೆಂಟನ್ನು ಕ್ರಮಬದ್ಧವಾಗಿ ಒಂದು ವರ್ಷಕಾಲ ಮಾಡಿದ್ದೇ ಆದರೆ ನೂರಕ್ಕೆ 95 ಭಾಗ ರೋಗಿಗಳಿಗೆ ಈ ಕಾಯಿಲೆ ಮತ್ತೆ ಬರುವುದಿಲ್ಲವೆಂಬುದಾಗಿ ಕಂಡು ಬಂದಿದೆ. ಇಂಥ ಎರಡು ಮಾಡರನ್ ಕ್ಲಿನಿಕ್‌ಗಳನ್ನು ತೆರೆಯಲು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎ. ಮುನಿಸ್ವಾಮಯ್ಯ.—ಹೆಚ್ಚು ಸಂಖ್ಯೆಯಲ್ಲಿ ರೋಗಿಗಳು ಆಸ್ಪತ್ರೆಗೆ ಬರುತ್ತಿದ್ದಾರೆ. ಇಲ್ಲಿ ಬೆಡ್‌ಗಳನ್ನು ಹೆಚ್ಚು ಮಾಡಬೇಕಾಗಿದೆ ಎಂತ ಆ ಆಸ್ಪತ್ರೆಯ ಅಧಿಕಾರಿಗಳು ಸರ್ಕಾರಕ್ಕೆ ತಿಳಿಸಿದ್ದಾರೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—No, Sir.

Sri K. LAKKAPPA.—May I know what steps the Government will take to hand over the building to that Hosptial ?

Sri K. NAGAPPA ALVA.—Government will take the normal course.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇತರ ಕೆಲವು ಆಸ್ಪತ್ರೆಗಳಲ್ಲಿರುವಂತೆ ಈ ಆಸ್ಪತ್ರೆಯಲ್ಲೂ ವೈಟಿಂಗ್ ಲಿಸ್ಟ್ ಇರುತ್ತದೆಯೇ ?

ಶ್ರೀ ಕೆ. ನಾಗಪ್ಪ ಆಳ್ವ.—ಇದೆ.

ಶ್ರೀ ಬಿ. ಚನ್ನಬೈರೇಗೌಡ.—ಈಗ ಆ ಆಸ್ಪತ್ರೆಯಲ್ಲಿ ಎಷ್ಟು ಜನ ಪೇಷೆಂಟ್ ಇದ್ದಾರೆ ;

ಶ್ರೀ ಕೆ. ನಾಗಪ್ಪ ಆಳ್ವ —ಆ ವಿವರಗಳು ಈಗ ನನ್ನಲಿಲ್ಲ.

Sri SANJEEVANATH AIKALA.—Was it proper to hand over a wing of this Hospital to the District Development Office ?

Sri K. NAGAPPA ALVA.—It was quite proper, Sir.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಲ್ಲಿ ಹೆಚ್ಚು ಬೆಡ್‌ಗಳು ಇಲ್ಲವೆ ಇರುವುದರಿಂದ ಅಂದರೆ ಸ್ಥಳ ಸಾಲದೆ ಇರುವುದರಿಂದ ವೈಟಿಂಗ್ ಲಿಸ್ಟಿನಲ್ಲಿ ದಿನ ದಿನಕ್ಕೂ ರೋಗಿಗಳ ಹೆಸರು ಜಾಸ್ತಿಯಾಗುತ್ತಿದೆಯಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಅದು ನಿಜ.

Mr. SPEAKER.—He said that he had no information with regard to the number of patients.

ಶ್ರೀ ಬಿ. ಚನ್ನಬೈರೇಗೌಡ.—ಈಗ ಆಲ್ಲಿ ಬಹಳ ಜನರು ಜಾಗವಿಲ್ಲವೆಂದು ಹೇಳಿ ಹಿಂದಕ್ಕೆ ಹೋಗುತ್ತಿರುವುದರಿಂದ ಅವರಿಗೆ ತುಂಬಾ ತೊಂದರೆಯಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಅಷ್ಟು ತೊಂದರೆಯೇನೂ ಆಗಿರಲಾರದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಡಿಸ್ಟ್ರಿಕ್ಟ್ ಕೋರ್ಟು, ಯೂನಿಸಿಫ್ ಸಂಸ್ಥೆ ಇತ್ಯಾದಿಗಳೆಲ್ಲ ಆಲ್ಲಿರುವುದರಿಂದ ಅಲ್ಲಿಂದ ಕೆಲವು ರೋಗಿಗಳನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು ಕೇಳುತ್ತಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕೆ. ನಾಗಪ್ಪ ಆಳ್ವ.—ಇಲ್ಲ.

Municipal High Schools in the State

*Q.—185. Sri B. CHANNABYRE GOWDA (Hoskote).—

Will the Government be pleased to state :—

(*a*) the number of Municipal High Schools in the State ;

(*b*) whether there has been representations from the Municipalities for the conversion of these Schools into Government High Schools ;

(*c*) whether they consider to incresae the present rate of grant-in-aid ?

A.— Sri S. R. KANTHI (Minister for Education).—

(*a*) 92.
(*b*) No.
(*c*) No.

ಶ್ರೀ ಬಿ. ಚನ್ನಬೈರೇಗೌಡ.—ಈಗ ತಾವು ಇಲ್ಲಿ ತಿಳಿಸಿರತಕ್ಕ 92 ಪೌರಸಭಾ ಪ್ರೌಢಶಾಲೆಗಳನ್ನು ನಡೆಸಲು ಆ ಪೌರಸಭೆಗಳಿಗೀಗ ಚೈತನ್ಯವಿಲ್ಲವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

†ಶ್ರೀ ಎಸ್. ಆರ್. ಕಂಠಿ.—ಆ ವಿಚಾರ ಸರ್ಕಾರಕ್ಕೆ ತಿಳಿದು ಬಂದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಅವುಗಳ ಹಣಕಾಸಿನ ಪರಿಸ್ಥಿತಿ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ನಮಗೆ ಆ ಹೈಸ್ಕೂಲುಗಳು ಯಾವ ರೀತಿಯಲ್ಲಿ ನಡೆಯುತ್ತಿವೆ ಯೆಂಬ ವಿಚಾರ ಮಾತ್ರ ತಿಳಿದುಬಂದಿದೆ. ಅವು ಚೆನ್ನಾಗಿ ಕೆಲಸ ಮಾಡುತ್ತಿವೆ, ಅವುಗಳ ಆಡಳಿತದಲ್ಲಿ ತಪ್ಪುಗಳೇನೂ ಕಂಡುಬಂದಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಹಾಗಾದರೆ ಸರ್ಕಾರದವರು ಆ ಗುಲ್ಬರ್ಗ ಜಿಲ್ಲೆಯಲ್ಲಿ ಕೆಲವು ಮುನಿಸಿಪಲ್ ಹೈಸ್ಕೂಲುಗಳನ್ನು ಹೇಗೆ ಸರ್ಕಾರಿ ಹೈಸ್ಕೂಲುಗಳನ್ನಾಗಿ ಪರಿವರ್ತನೆ ಮಾಡಿದರು ?

ಶ್ರೀ ಎಸ್. ಆರ್. ಕಂಠಿ.—ಅವು ಮುನಿಸಿಪಲ್ ಹೈಸ್ಕೂಲುಗಳಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ವಿದ್ಯಾ ಮಂತ್ರಿಗಳು ಗುಂಡ್ಲುಪೇಟೆಗೆ ಬಂದಿದ್ದಾಗ History making place ಎಂತ ಹೇಳಿದರು. ಆ ಮಾತು ಹಾಗಿರಲಿ. ಅಲ್ಲಿಯ ಮುನಿಸಿಪಾಲಿಟಿಯವರು ಅವರಿಗೆ ಆ ಹೈಸ್ಕೂಲನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. ಅದನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಅವರು ಕೇಳಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ನಾನು ಆ ರೀತಿ ಹೇಳಲಿಲ್ಲ. ಅದು ಬಹಳ ದೊಡ್ಡ ಮಾತು. ಅಲ್ಲಿಯ ಜನರು ಅವರ ಹೈಸ್ಕೂಲನ್ನು ನಡೆಸುವುದಕ್ಕೆ ಹೆಚ್ಚಿನ ಗ್ರಾಂಟನ್ನು ಕೊಡಬೇಕೆಂದು ಕೇಳಿಕೊಂಡರು. ಮೇಲಾಗಿ ಬಿಲ್ಡಿಂಗ್ ವಿಚಾರವನ್ನೂ ತಿಳಿಸಿದರು.

ಶ್ರೀ ಬಿ. ಚನ್ನಬೈರೇಗೌಡ.—ಗುಲ್ಬರ್ಗಾದಲ್ಲಿ ಸರ್ಕಾರದವರೀಗ 5 ಖಾನಗೀ ಶಾಲೆಗಳನ್ನು ಸರ್ಕಾರಿ ಹೈಸ್ಕೂಲುಗಳನ್ನಾಗಿ ಪರಿವರ್ತನೆ ಮಾಡಿದ್ದಾರೆ. ಅದೇ ರೀತಿ ಇಲ್ಲಿರತಕ್ಕ ಖಾನಗೀ ಹೈಸ್ಕೂಲನವರು ಕೇಳಿದರೆ ಸರ್ಕಾರದವರು ತೆಗೆದುಕೊಳ್ಳುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಹಾಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಆ ಎಲ್ಲ ಶಾಲೆಗಳ ಭಾರವನ್ನೂ ಸರ್ಕಾರ ಹೊರಬೇಕೆಂದರೆ ಬಹಳ ಕಷ್ಟವಿದೆ. ಈ ಹಿಂದೆ ಇದ್ದ ಸರ್ಕಾರ ಆ ರೀತಿ ಆಜ್ಞೆ ಮಾಡಿತ್ತು. ಹೈದ್ರಾಬಾದ್ ಕರ್ಣಾಟಕ ಬಹಳ ಹಿಂದುಳಿದ ಪ್ರದೇಶವೆಂದು ಹಾಗೆ ಆರ್ಡರ್ ಆಗಿತ್ತು.

ಶ್ರೀ ಐ. ನಾರಾಯಣಗೌಡ.—ಆ ಹೈದ್ರಾಬಾದ್ ಕರ್ಣಾಟಕ ಪ್ರದೇಶ ಎಷ್ಟು ಹಿಂದುಳಿದಿದೆಯೋ ಅಷ್ಟೇ ಹಳೇ ಮೈಸೂರು ರಾಜ್ಯದಲ್ಲೂ ಹಿಂದುಳಿದಿರತಕ್ಕ ಪ್ರದೇಶದವರು ಬಂದು ಕೇಳಿದರೆ ಅವರಿಗಾದರೂ ಸಹಾಯ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಆ ಹೈದ್ರಾಬಾದ್ ಕರ್ಣಾಟಕ ಪ್ರದೇಶಕ್ಕೆ ಹೋಗಿ ನೋಡಿಕೊಂಡು ಬಂದರೆ ಅವರು ಇಂಥ ಪ್ರಶ್ನೆಯನ್ನೇ ಹಾಕುವದಿಲ್ಲ.

ಶ್ರೀ ಸಿ. ಜೆ ಮುಕ್ಕಣ್ಣಪ್ಪ.—ಬೇರೆ ಬೇರೆ ಮಂತ್ರಿಗಳು ಪ್ರವಾಸ ಹೋದಕಡೆಗಳಲ್ಲೆಲ್ಲ ಆ ಮುನಿಸಿಪಲ್ ಹೈಸ್ಕೂಲುಗಳವರ ಅಹವಾಲನ್ನು ಕೇಳಿ, ಅವು ಅವರಿಗೆ ಮಾರಲಾರದ ಹೊರೆಯಾಗಿರುತ್ತವೆಂಬುದನ್ನು ಅವರು ತಿಳಿದುಕೊಂಡು ಬಂದಿರುತ್ತಾರೆಂಬ ಅಂಶ ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಆ ರೀತಿ ಅನೇಕ ಜನ ಮಂತ್ರಿಗಳು ಹೇಳಿರತಕ್ಕದ್ದನ್ನೇ ನನಗೆ ಅವರು ತಿಳಿಸಿಲ್ಲ.

Starting of Industrial Estates in Mandya District.

*Q.—222. Sri A. G. BANDI GOWDA (Srirangapatna).—

Will the Government be pleased to state :—

(*a*) whether they intend to start two Industrial Estates in Mandya District ;